> ಸುಳ್ಳುಸುದ್ದಿಗಳು ಎಂದಿನಿಂದಲೂ ಇವೆಯಾದರೂ ಇತ್ತೀಚೆಗಿನ ದಿನಗಳವರೆಗೆ ಹೆಚ್ಚು ಸುದ್ದಿ ಮಾಡಿರಲಿಲ್ಲ. ಆದರೆ ಅದು ಇಂದಿನ ಟೆಕ್ನಾಲಜಿಯನ್ನು ಬಳಸಿಕೊಂಡು ಎಲ್ಲ ದೇಶದ ಚುನಾವಣೆಗಳು, ಆಯ್ಕೆಯಾದ ಸರ್ಕಾರಗಳು, ವಿರೋಧ ಪಕ್ಷಗಳು, ಪ್ರಭಾವಶಾಲಿ ಉದ್ಯಮಿಗಳು, ಪತ್ರಿಕೆಗಳು ಎಲ್ಲರೂ ಸುಳ್ಳು ಸುದ್ದಿಗಳನ್ನು ಸೃಷ್ಟಿಸುವ ಕಾರ್ಯದಲ್ಲಿ ಕೈಗೂಡಿಸಿದ್ದಾರೆ.

## ವಿನೋದಗಳಿಗೂ ಕಮ್ಮಿಯಿಲ್ಲ

ಸುಳ್ಳುಸುದ್ದಿಗೆ ಸಂಬಂಧಿಸಿದಂತೆ ಕೆಲವು ವಿನೋದಗಳೂ ಇವೆ. 2016ರ ನವೆಂಬರಿನಲ್ಲಿ ಭಾರತ ಸರ್ಕಾರ 500 ಮತ್ತು 1000 ರೂಪಾಯಿ ನೋಟುಗಳನ್ನು ರದ್ದುಪಡಿಸಿ, 2000 ರೂಪಾಯಿ ನೋಟನ್ನು ಚಾಲ್ತಿಗೆ ತಂದಿತು. ಹೊಸದಾಗಿ ಬಂದ ನೋಟುಗಳಲ್ಲಿ ಸರ್ಕಾರ ಹೊಸ ತಾಂತ್ರಿಕತೆಯನ್ನು (ಚಿಪ್‌ಗಳನ್ನು) ಅಳವಡಿಸಿದೆಯೆಂದೂ, 120 ಮೀಟರುಗಳ ಆಳದಲ್ಲಿ ನೋಟುಗಳನ್ನು ಬಚ್ಚಿಟ್ಟರೂ ಅದನ್ನು ಸರ್ಕಾರ ಪತ್ತೆಹಚ್ಚುತ್ತದೆ ಎನ್ನುವ ಸುಳ್ಳುಸುದ್ದಿ ಸುದ್ದಿವಾಹಿನಿಲ್ಲಿ, ವಾಟ್ಸ್ಆ್ಯಪ್‌ಗಳಲ್ಲಿ ಹರಡಿತು. ಈ ಸುದ್ದಿ ಸುಳ್ಳೆಂದು ಹಣಕಾಸು ಸಚಿವ ಅರುಣ್ ಜೇಟ್ಲಿ ಸ್ಪಷ್ಟಪಡಿಸಿದರೂ, ಸಚಿವರೇ ಜನರನ್ನು ಮೂರ್ಖರನ್ನಾಗಿ ಮಾಡಲು ಸುಳ್ಳು ಹೇಳುತ್ತಿದ್ದಾರೆ ಎಂದು ನಂಬಿದವರೂ ಇದ್ದರು. 2017ರಲ್ಲಿ ಒಂದು ಮಗುವಿನ ಅಪಹರಣದ ಸುಳ್ಳುಸುದ್ದಿ ಹರಡಿತು. ಇದರಿಂದಾಗಿ ಉದ್ರಿಕ್ತಗೊಂಡ ಗುಂಪೊಂದು 7 ಜನ ಅಮಾಯಕರನ್ನು ಸುಟ್ಟು ಕೊಂದಿತು.

ಭಾರತದ ಮಾಧ್ಯಮ ನೀತಿಗಳ ಬಗ್ಗೆ ಅಧ್ಯಯನ ನಡೆಸಿರುವ ಪ್ರಭಾಕರ್ ರಾವ್ ಅವರ ಪ್ರಕಾರ, ಸುಳ್ಳುಸುದ್ದಿಗಳ ಪಿಡುಗು ಭಾರತದಲ್ಲಿ ಅತಿ ಎನ್ನುವಷ್ಟು ಹೆಚ್ಚಿದೆ. ಸುಳ್ಳುಸುದ್ದಿ ತಡೆಗಟ್ಟಲು ಭಾರತದಲ್ಲಿ ಸಮರ್ಪಕ ಕಾನೂನು ಇಲ್ಲದಿರುವುದು ಈ ಪಿಡುಗು ಉಲ್ಬಣಿಸಲು ಕಾರಣಗಳಲ್ಲೊಂದು.

ಸುಳ್ಳುಸುದ್ದಿಗಳ ಖಾತೆಗಳನ್ನು ಮುಚ್ಚಲು ಭಾರತದಲ್ಲಿ ವಾಟ್ಸ್ಆ್ಯಪ್ ಶ್ರಮಿಸುತ್ತಿದೆ. ಒಂದು ವಾಟ್ಸ್ಆ್ಯಪ್ ಗುಂಪನ್ನು 256 ಜನರಿಗೆ ಮಿತಗೊಳಿಸಿದೆ. ಒಟ್ಟಿಗೆ ಹಲವರಿಗೆ ಕಳಿಸುವ ಸಂಖ್ಯೆಯನ್ನು ಐದಕ್ಕೆ ಮಿತಗೊಳಿಸಿದೆ. ಚುನಾವಣೆಗಳಲ್ಲಿ ತನ್ನ ಪಾತ್ರವನ್ನು ಕಡಿಮೆ ಮಾಡಿಕೊಳ್ಳುವ ನೈತಿಕತೆ ನಿರ್ವಹಿಸಲು ಶ್ರಮಿಸುತ್ತಿದೆ. ಆದರೆ ಇದು ಸುಲಭವಲ್ಲ.

## ಹಾವಳಿಗೆ ತಡೆಯಿಲ್ಲವೇ?

ಅಂದಹಾಗೆ, ಸುಳ್ಳು ಸುದ್ದಿಗಳನ್ನು ಏಕೆ ತಡೆಯಲಾಗುವುದಿಲ್ಲ? ಈ ಬಗ್ಗೆ ಕಾನೂನುಗಳನ್ನು ತರಲು ಇರುವ ಅಡೆತಡೆಗಳೇನು?

ಸುಳ್ಳುಸುದ್ದಿಗಳನ್ನು ತಡೆಯಲು ಕಾನೂನನ್ನು ತರಲು ಹಲವು ಅಡಚಣೆಗಳಿವೆ. ಏಪ್ರಿಲ್ 2018ರಲ್ಲಿ ಭಾರತದ ಮಾಹಿತಿ ಮತ್ತು ತಂತ್ರಜ್ಞಾನ ಸಚಿವರು 'ಸುಳ್ಳು ಸುದ್ದಿ' ಹರಡುವವರನ್ನು ಬಂಧಿಸಬಹುದಾದ ಕಾನೂನನ್ನು ತರುವ ಪ್ರಸ್ತಾಪವನ್ನು ಸರ್ಕಾರದ ಮುಂದಿಟ್ಟರು. ಆ ಕೂಡಲೇ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸಬಹುದಾದ ಆ ಕಾನೂನನ್ನು ಹಿಂತೆಗೆದುಕೊಳ್ಳುವಂತೆ ತೀವ್ರ ಪ್ರತಿಭಟನೆ ಎದುರಾಗಿ, ಸಚಿವರು ತಮ್ಮ ಪ್ರಸ್ತಾಪವನ್ನು ಹಿಂತೆಗೆದುಕೊಳ್ಳಬೇಕಾಯ್ತು. ಜೂನ್ 2018ರಲ್ಲಿ ಸುಳ್ಳುಸುದ್ದಿಗಳ ವಿರುದ್ಧ ಹೋರಾಟ ನಡೆಸುತ್ತಿದ್ದ ಸುಶಾಂತ ಚಕ್ರವರ್ತಿ ಎನ್ನುವ ಕಾರ್ಯಕರ್ತನನ್ನು ಬರ್ಬರವಾಗಿ ಹತ್ಯೆ ಮಾಡಲಾಯಿತು. ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದ ಸುಳ್ಳುಸುದ್ದಿಗಳನ್ನು ತಡೆಗಟ್ಟಲು ಅಮೀರ್ ಅಲಿ ಶಾ ಎನ್ನುವ ವ್ಯಕ್ತಿ 'ಕಾಶ್ಮೀರದಲ್ಲಿ ಸುಳ್ಳನ್ನು ನಿಲ್ಲಿಸಿ' (stop fake in Kashmir) ಎನ್ನುವ ಅಂತರ್ಜಾಲ ತಾಣ ನಡೆಸುತ್ತಿದ್ದು ಸುದ್ದಿಗಳ ನಿಖರತೆಯನ್ನು ಖಚಿತ ಪಡಿಸಿಕೊಳ್ಳಲು ಅನುವು ಮಾಡಿಕೊಟ್ಟಿದ್ದಾರೆ. ಇಂಡೋನೇಷ್ಯಾದಲ್ಲಿ ಸುಳ್ಳುಸುದ್ದಿಗಳನ್ನು ನಿಲ್ಲಿಸುವ 'ಟರ್ನ್ ಬ್ಯಾಕ್ ಹೋಕ್ಸ್' (Turn back hoax) ಎನ್ನುವ ಚಳವಳಿ ನಡೆದಾಗ ಅದು ಇಸ್ಲಾಂ ಧರ್ಮದ ವಿರುದ್ಧ ನಡೆಸುತ್ತಿರುವ 'ಪಾಪಕಾರ್ಯ' ಎನ್ನುವ ಗಲಾಟೆಗಳು ನಡೆದವು.

ಮಲೇಷ್ಯಾದಲ್ಲಿ ಏಪ್ರಿಲ್ 2018ರಲ್ಲಿ 'ಆಂಟಿ ಫೇಕ್ ನ್ಯೂಸ್ ಬಿಲ್' ಜಾರಿಗೆ



ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್

ತರಲಾಯ್ತು. ಆದರೆ ಆ ಕಾನೂನನ್ನು ಜಾರಿಗೆ ತಂದ ಪ್ರಧಾನಿ ನಜೀಬ್ ರಜಾಕ್ ಮತ್ತವರ ಬೆಂಬಲಿಗರು 3.5. ಶತಕೋಟಿ ಡಾಲರ್ ಭ್ರಷ್ಟಾಚಾರದ ಆರೋಪ ಎದುರಿಸಬೇಕಾಯಿತು. ಪ್ರಧಾನಿಯ ವೈಯಕ್ತಿಕ ಬ್ಯಾಂಕಿನ ಖಾತೆಗೆ 731 ದಶಲಕ್ಷ ಹಣ ಪಾವತಿಯಾಗಿತ್ತು. ಆದರೆ, ಮುಂದಿನ ಚುನಾವಣೆಯಲ್ಲಿ ನಜೀಬ್ ರಜಾಕ್ ಸೋಲನುಭವಿಸಿದ.

ಭ್ರಷ್ಟಾಚಾರ ತುಂಬಿರುವ ದೇಶಗಳಲ್ಲಿ ಒಳ್ಳೆಯ ಉದ್ದೇಶಕ್ಕಾಗಿ ತರುವ ಕಾನೂನನ್ನೂ ರಾಜಕಾರಣಿಗಳು ಮತ್ತು ಹಣವುಳ್ಳವರು ವೈಯಕ್ತಿಕ ಲಾಭಗಳಿಗೆ ದುರುಪಯೋಗಪಡಿಸಿಕೊಳ್ಳುವ ಮತ್ತು ನಿಜವನ್ನು ಬರೆಯುವವರನ್ನೇ ಸುಳ್ಳು ಸುದ್ದಿಗಾರರೆಂದು ಬಂಧಿಸುವ ಸಾಧ್ಯತೆಯಿದೆ. ಆ ಕಾರಣದಿಂದಾಗಿ ಸುಳ್ಳುಸುದ್ದಿಗಳನ್ನು ನಿಯಂತ್ರಿಸುವ ಕಾನೂನನ್ನು ತರುವುದನ್ನು ಮಾಧ್ಯಮದ ಎಲ್ಲರೂ ವಿರೋಧಿಸುತ್ತಾರೆ. ಮುಂದುವರೆದ ದೇಶಗಳಲ್ಲಿಯೂ ಬಲವಾದ ಸಾಕ್ಷ್ಯಾಧಾರಗಳಿಲ್ಲದಿದ್ದರೆ ಅಥವಾ ಸುಳ್ಳುಸುದ್ದಿಯ ಸೃಷ್ಟಿಕರ್ತರು ಯಾರೆಂಬುದು ತಿಳಿಯದಿದ್ದರೆ ಕೈ ಕಟ್ಟಿ ಕೂರಬೇಕಾದ ಪರಿಸ್ಥಿತಿಯಿದೆ.

## ನಮ್ಮ ಜವಾಬ್ದಾರಿಯೂ ಇದೆ

ಸುಳ್ಳುಸುದ್ದಿಯನ್ನು ಪ್ರಕಟಿಸುವ ಅಗತ್ಯವೇ ಇಲ್ಲದೆ, ಜನರಿಗೆ ನಂಬಲರ್ಹವಾದ ಸುದ್ದಿಗಳನ್ನೇ ನೀಡುವ ವಿಶ್ವಾಸಾರ್ಹ ಮಾಧ್ಯಮಗಳು ಖಂಡಿತಾ ಇವೆ. ಅಂತಹ ಮಾಧ್ಯಮಗಳನ್ನು ಓದುಗರು ತಮ್ಮದಾಗಿಸಿಕೊಂಡು ಉತ್ತೇಜನ ನೀಡಬೇಕು.

ಮಾಧ್ಯಮ ವರದಿಗಳನ್ನು ಓದಿ ಅರ್ಥೈಸುವ ಬಗ್ಗೆ 2017ರಲ್ಲಿ ತೈವಾನಿನ ಸರ್ಕಾರ ಶಾಲಾಪಠ್ಯದಲ್ಲಿ ಒಂದು ಅಧ್ಯಾಯವನ್ನೇ ಪರಿಚಯಿಸಿದೆ. 'ಮಾಧ್ಯಮ ಶೈಕ್ಷಣಿಕತೆ' ಎನ್ನುವ ಈ ಹೊಸ ಓದಿನಲ್ಲಿ, ಹೊಸ ತಲೆಮಾರಿನವರಿಗೆ 21ನೇ ಶತಮಾನದ ಓದನ್ನು ಅರ್ಥೈಸುವ, ವಿಶ್ಲೇಷಿಸುವ ಬಗ್ಗೆ ಹೇಳಿಕೊಡಲಾಗುತ್ತಿದೆ. ಈ ಮಾದರಿ ಭಾರತವೂ ಸೇರಿದಂತೆ ಎಲ್ಲ ದೇಶಗಳಿಗೂ ಅನುಕರಣೀಯ.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: **feedback@sudha.co.in**